# ವಿದೇಶದಲ್ಲಿ ಪುತ್ತೂರು ಕಲಾವಿದರ ನೃತ್ಯ ಝಲಕ್!

ಭರತನಾಟ್ಯವನ್ನು ನಮ್ಮ ನಾಡಿನಾದ್ಯಂತ ಅಲ್ಲದೆ ದೂರದ ಪಶ್ಚಿಮ ಆಫ್ರಿಕಾದಲ್ಲೂ ಪ್ರದರ್ಶನ ಮಾಡಿ 70ನೇ ಸ್ವಾತಂತ್ರ್ಯೋತ್ಸವವನ್ನು ವಿಭಿನ್ನವಾಗಿ ಆಚರಿಸಿ ಸಂಭ್ರಮಿಸಿದ ಕೀರ್ತಿ ಪುತ್ತೂರಿನ ಮೂಕಾಂಬಿಕಾ ಕಲ್ಚರಲ್ ಸಂಸ್ಥೆಯ ಸದಸ್ಯರ ಹೆಚ್ಚುಗಾರಿಕೆ. ದೇಸೀ ಕಲೆಯನ್ನು ವಿದೇಶದಲ್ಲಿ ಅನಾವರಣಗೊಳಿಸಿದ ಅಗ್ಗಳಿಕೆಗೂ ಪಾತ್ರವಾಗಿದೆ ಈ ಸಂಸ್ಥೆ.

■ ಕೃಷ್ಣವೇಣಿ ಪ್ರಸಾದ್ ಮುಳಿಯ

ದೇಶದೆಲ್ಲೆಡೆ ಅಂದು ಸ್ವಾತಂತ್ರ್ಯೋತ್ಸವ ಸಂಭ್ರಮ. ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನ ಕಲಾವಿದರು ಈ ಸಂಭ್ರಮವನ್ನು ವಿದೇಶದಲ್ಲಿ ನೃತ್ಯ ಕಾರ್ಯಕ್ರಮ ನಡೆಸಿಕೊಡುವುದರ ಮೂಲಕ ವಿಭಿನ್ನವಾಗಿ ಆಚರಿಸಿಕೊಂಡರು. ಪುತ್ತೂರಿನಂತಹ ಪುಟ್ಟ ಪಟ್ಟಣದಿಂದ ವಿದೇಶಕ್ಕೆ ಹೋಗಿ ನೃತ್ಯ ಪ್ರದರ್ಶನ ನೀಡಿದ ಹೆಮ್ಮೆ ಇಲ್ಲಿನ ಮೂಕಾಂಬಿಕಾ ಕಲ್ಚರಲ್ ಸಂಸ್ಥೆಗೆ ಸಂದಿದೆ. ಇದು ಈ ಕಲಾವಿದರ ಶ್ರದ್ಧೆ, ಭಕ್ತಿ, ಆಸಕ್ತಿ, ನಾಟ್ಯದಲ್ಲಿನ ವಿಭಿನ್ನತೆ ಹಾಗೂ ಜನರಲ್ಲಿ ಸದ್ಭಾವನೆ ಮೂಡಿಸುವ ಪ್ರವೃತ್ತಿಯುಳ್ಳ ಸ್ವಚ್ಛ ಮನಸ್ಸುಗಳಿಂದ ಸಾಧ್ಯವಾಯಿತು.

ಅದು ಪಶ್ಚಿಮ ಆಫ್ರಿಕಾದ ಐವರಿ ಕೋಸ್ಟ್ (ಆ ದೇಶದ ಆರ್ಥಿಕ ರಾಜಧಾನಿಯೂ ಹೌದು) ಅಭಿಜಾನ್ ನಗರದಲ್ಲಿ ನಡೆದ ಭರತನಾಟ್ಯ ಕಾರ್ಯಕ್ರಮ. ಅಲ್ಲಿದ್ದದ್ದು ಶೇ.50ರಷ್ಟು ಪ್ರೇಕ್ಷಕರು ಭಾರತೀಯರೇ. ಜತೆಗೆ ಬೇರೆ ಬೇರೆ ದೇಶದ ರಾಯಭಾರಿಗಳು, ಸಚಿವರು, ಮೇಯರ್, ಉದ್ಯಮಿಗಳು ಈ ಕಲಾವಿದರ ನೃತ್ಯಪ್ರದರ್ಶನವನ್ನು ಕಣ್ತುಂಬಿಕೊಂಡರು. ನೃತ್ಯದಲ್ಲಿನ ಆಂಗಿಕ ಹಾಗೂ ಭಾವನಾತ್ಮಕ ಅಭಿನಯವನ್ನು ಮನಸಾರೆ ಕೊಂಡಾಡಿದರು. 70ರ ಸ್ವಾತಂತ್ರ್ಯ ಸಂಭ್ರಮಕ್ಕೆ ನೃತ್ಯದ ಮೆರುಗು ಅಲ್ಲಿನ ಜನರಲ್ಲಿ ಮರೆಯಲಾಗದ ಹೆಜ್ಜೆ ಗುರುತಾಯಿತು.

ಸ್ವಾತಂತ್ರ್ಯೋತ್ಸವದ ಮರುದಿನ ಮತ್ತೊಂದು ಅಮೋಘ ನೃತ್ಯ ಪ್ರದರ್ಶನ..! ಈ ಕಾರ್ಯಕ್ರಮಕ್ಕೆ ಆಫ್ರಿಕಾದ ಪ್ರಜೆಗಳು ಹೆಚ್ಚು ಜಮಾಯಿಸಿದ್ದರು. ಮೂಕಾಂಬಿಕಾ ಕಲ್ಚರಲ್ ಸಂಸ್ಥೆಯ ರೂವಾರಿ ವಿದ್ವಾನ್ ದೀಪಕ್ ಅವರು 'ಸಂಪೂರ್ಣ ರಾಮಾಯಣ' ನೃತ್ಯ ರೂಪಕವನ್ನು ಪ್ರಸ್ತುತಪಡಿಸಲು ಆರಿಸಿಕೊಂಡಿದ್ದರು. ಮೊದಲು ಪ್ರೇಕ್ಷಕರಿಗೆ ರಾಮಾಯಣದ ಕಥೆಯನ್ನು ಸೂಕ್ಷ್ಮ ರೂಪದಲ್ಲಿ ಆಂಗ್ಲ ಭಾಷೆಯಲ್ಲಿ ವಿವರಿಸಲಾಯಿತು. ಅದನ್ನು ಹರ್ಮನ್ (ರಾಯಭಾರಿ ಕಚೇರಿಯ ಉದ್ಯೋಗಿ)ಎಂಬವರು ಫ್ರೆಂಚ್ ಭಾಷೆಯಲ್ಲಿ ಬದಲಿಸಿ ಸಭಿಕರಿಗೆ ಕಥೆಯ ಸಾರವನ್ನು ತಿಳಿಯಪಡಿಸಿದರು. ಆ ಬಳಿಕ ನೃತ್ಯ ಪ್ರಾರಂಭಿಸಲಾಯಿತು. ಇದು ಪ್ರೇಕ್ಷಕರಿಗೆ ನಾಟ್ಯದ ಸತ್ವವನ್ನು ತಿಳಿದು ಆನಂದಿಸಲು ಸಹಕಾರವಾಯಿತು. ನೃತ್ಯದ ಪ್ರಾರಂಭದಲ್ಲಿ ರಂಗಾಭಿವಂದನೆ



ದೀಪಕ್ ಮತ್ತು ಪ್ರೀತಿ ಕಲಾ ದಂಪತಿ